**ದಿಃ09.07.2018 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಮುಖ್ಯವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಈ ದಿನ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಮಜಕೂರುಗಳು ಸತ್ಯವಾಗಿರುತ್ತವೆ.

ಪಾಲುದಾರಿಕೆ ಸಂಸ್ಥೆಯ ವಿಸರ್ಜನಾ ಪತ್ರವನ್ನು ತೋರಿಸಿದಲ್ಲಿ ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ನೋಡಿದರೆ ನಾನು ಗುರುತಿಸಬಲ್ಲೆ.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನನಗೆ 60 ವರ್ಷ ವಯಸ್ಸು. ಒಬ್ಬ ವ್ಯಕ್ತಿಗೆ ತನ್ನ ಸುತ್ತ ಮುತ್ತಲಿನ ಪರಿಸರವನ್ನು ತಿಳಿದುಕೊಂಡು ಲೋಕಜ್ಞಾನವನ್ನು ಪಡೆದುಕೊಳ್ಳಲು ಅಂದಾಜು 20 ರಿಂದ 25 ವರ್ಷ ವಯಸ್ಸು ಬೇಕು ಅಂದರೆ ಸರಿ. ತವನಪ್ಪ ಅವರ 3 ಜನ ಮಕ್ಕಳ ಬಗ್ಗೆ ನನಗೆ ಗೊತ್ತಾಗಿ ಅಂದಾಜು 30 ರಿಂದ 35 ವರ್ಷಗಳಾಗಿವೆ. 50 ವರ್ಷಗಳ ಹಿಂದಿನ ವಿಷಯಗಳು ನನಗೆ ಗೊತ್ತಿಲ್ಲ.

2. ನಾನು ನನ್ನ ಅಂಗಡಿಯಲ್ಲಿ ಕಳೆದ 40 ವರ್ಷಗಳಿಂದ ಕುಳಿತುಕೊಳ್ಳುತ್ತಿದ್ದೇನೆ. ಎಲ್ಲ ವ್ಯವಹಾರಗಳನ್ನು ನಮ್ಮ ತಂದೆ ನೋಡಿಕೊಳ್ಳುತ್ತಿದ್ದರು. ನಮ್ಮ ತಂದೆ ಇರುವರೆಗೂ ಅವರನ್ನೆ ಓಣಿಯಲ್ಲಿ ವ್ಯವಹಾರಗಳಿಗೆ ಕರಿಯುತ್ತಿದ್ದರು ಅವರು ಹೇಳಿದಂತೆ ನಾವು ಸಹ ಹೋಗುತ್ತಿದ್ದೇವು. ನಮ್ಮ ತಂದೆ ಯಾವುದಾದರೂ ಕಾರ್ಯಕ್ರಮಕ್ಕೆ ಹೋಗು ಅಂತ ಹೇಳಿದರೆ ಒಮ್ಮೊಮ್ಮೆ ಹೋಗುತ್ತಿದ್ದೆ ಒಮ್ಮೊಮ್ಮೆ ಇಲ್ಲ. ನನಗೆ ನಮ್ಮ ತಂದೆ ಯಾವುದೇ ದಾಖಲೆಗಳ ಮೇಲೆ ಸಹಿ ಮಾಡುವ ಮುನ್ನ ತನ್ನನ್ನು ಕೇಳಿ ಸಹಿ ಮಾಡಬೇಕು ಅಂತ ನನಗೆ ಹೇಳಿದ್ದರು ಅಂದರೆ ಸರಿ. ನನ್ನ ಕ್ರಯಪತ್ರಕ್ಕೆ ಸಹಿ ಮಾಡಿರುವುದನ್ನು ಬಿಟ್ಟರೆ ಬೇರೆ ದಾಖಲೆಗೆ ಸಹಿ ಮಾಡಿಲ್ಲ ಅಂದರೆ ಸರಿಯಲ್ಲ. ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಸಾಕ್ಷಿ ಸ್ವತಃ ಹೇಳುತ್ತಾರೆ ಬರಮಪ್ಪ ಲೆಂಗಡೆಯವರು ಮನೆಗೆ ಕರಿಸಿದ್ದರು, ನಾವು 3 ಜನ ಅಣ್ಣ ತಮ್ಮಂದಿರು ಟಿ ಬಿ ಲೆಂಗಡೆ ಎನ್ನುವ ಅಂಗಡಿಯನ್ನು ಅದರಲ್ಲಿರುವ ಪಾಲುದಾರಿಕೆಯನ್ನು, ಬರಮಪ್ಪ ಮತ್ತು ವರ್ಧಮಾನ ಕೂಡಿ ಅನಂತರಾಜರವರಿಗೆ ಬಿಟ್ಟು ಕೊಡುವುದಿದೆ ಎಂದು ಹೇಳಿ ಪಾರ್ಟನರ್ ಶಿಪ್ ವಜಾ ಮಾಡುತ್ತೇವೆ ಎಂದು ಹೇಳಿ 1 ವಿಸರ್ಜನಾ ಪತ್ರ ಮಾಡಿದ್ದಾರೆ 3 ಜನರೂ ಸಹಿ

ಮಾಡಿದ್ದಾರೆ ಆಮೇಲೆ ನಾನೂ ಮಾಡಿದ್ದೇನೆ. ನನಗೆ ತಾರೀಖು ನೆನಪಿಲ್ಲ. ಅಂದಾಜು 20 ವರ್ಷಗಳಾಗಿರಬಹುದು. ಆಗ ನನಗೆ ಅಂದಾಜು 30 ವರ್ಷ ವಯಸು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 3 ನೇ ಪ್ಯಾರಾದಲ್ಲಿ ಕೊನೆಯ ಎರಡು ಸಾಲುಗಳಲ್ಲಿ ಬರೆದ ಸಂಗತಿ ನಿಜ ಇರುತ್ತದೆ. ಆ ದಾಖಲೆಯಲ್ಲಿ ಏನು ಬರೆಯಲಾಗಿದೆ ಅಂತ ನನಗೆ ಮೌಖಿಕವಾಗಿ ಹೇಳಿದ್ದರು ಆದರೆ ದಾಖಲೆಯನ್ನು ನನಗೆ ಓದಲು ಆಗಿರಲಿಲ್ಲ. ನನಗೆ ಬರಮಪ್ಪ ಅವರು ಆತ್ಮೀಯರು.

3. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಸಂಗತಿಗಳನ್ನು ವಿವೇಕ ತಂದೆ ಅನಂತರಾಜ ಲೇಂಗಡೆಯವರು ಕೊಟ್ಟಿರುತ್ತಾರೆ. ವಿವೇಕ ಲೇಂಗಡೆಯಮರ ನನಗೆ ಇದೇ ರೀತಿ ಸಾಕ್ಷಿ ಹೇಳಬೇಕು ವಕೀಲರು ಕೇಳಿದಾಗ ಉತ್ತರ ಕೊಡಬೇಕು ಅಂತ ನನಗೆ ಹೇಳಿ ಕೊಟ್ಟಿದ್ದರು ಅಂದರೆ ಹೌದು. ಈ ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ ಬಗ್ಗೆ ವಾದಿ ಪ್ರತಿವಾದಿಯರು ಈ ದಾವೆಯ ಬಗ್ಗೆ ನನಗೆ ಯಾವುದೇ ಮಾತಿಹಿ ಇಲ್ಲ, ವಿವೇಕ ಅನಂತರಾಜ ಲೆಂಗಡೆಯವರು ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಅದರಲ್ಲಿ ಇದ್ದ ಹಾಗೆನೇ ನಾನು ಹೇಳಿದ್ದೇನೆ. ನನ್ನ ಸಮಕ್ಷಮ 3 ಜನರೂ ಸಹಿ ಮಾಡಿಲ್ಲ ಅಂದರೆ ಸರಿಯಲ್ಲ.

4. ನನ್ನ ಮಾವ ಅಂದರೆ ನನ್ನ ಅಕ್ಕನ ಗಂಡ, ಅವರ ಹೆಸರು ದೇವೆಂದ್ರಪ್ಪ ಮುತ್ತಿನ. ಅವರು ಮೃತ ಪಡುವವರೆಗೆ ಅವರಿಗೆ 80 ವರ್ಷ ವಯಸ್ಸು ಇತ್ತು. ನನ್ನ ಮಾವ ಇರದೇ ಇದ್ದರೂ ಅಲ್ಲಿ ಹಾಜರು ಇದ್ದು ಸಹಿ ಮಾಡಿದ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ 1 ನೇ ಪ್ರತಿವಾದಿಗೆ ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.